(3)

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹುಡೇಬಿಯಾ ಎಜುಕೇಷನಲ್ ಸೊಸೈಟಿ ಹುಬ್ಬಳ್ಳಿ, ಇವರಿಗೆ ಡಿ-ಫಾರ್ಮ ಕೋರ್ಸನ್ನು ಪ್ರಾರಂಭಿಸಲು ನೀಡಿದ್ದ ಅನಾಕ್ಷೇಪಣಾ ಪತ್ರವನ್ನು ಪುನರ್ ಸ್ಥಾಪಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಪತ್ರ ಸಂಖ್ಯೆ: ಆಕುಕ 110 ಪಿಟಿಡಿ 84 (1) ದಿನಾಂಕ: 13.06.84.

2) ಅಧ್ಯಕ್ಷರು, ಹುಡೇಬಿಯಾ ಎಜುಕೇಷನಲ್ ಸೊಸೈಟಿ ಹುಬ್ಬಳ್ಳಿ, ಇವರ ಮನವಿಯ ದಿನಾಂಕ: 28-4-2005.

3) ಅಧ್ಯಕ್ಷರು, ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಔನಿಇ/ ಪಪ್ರಾಮಂ/ 30/ ವೈವಿ/2005-2006, ದಿನಾಂಕ: 13.9.2005.

4) ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು. ಇವರ ಪತ್ರ ಸಂಖ್ಯೆ:ಔನಿಇ/110/ಯೋಜನೆ/2005--2006, ದಿನಾಂಕ:16.9.2005.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: 1 ರಲ್ಲಿನ ಸರ್ಕಾರದ ಪತ್ರದ ದಿನಾಂಕ: 13.06.84 ರಲ್ಲಿ ಅಲ್-ಫಲ್ಲಾ ಕಲ್ಚರಲ್ ಅಂಡ್ ಎಜುಕೇಷನಲ್ ಅಸೋಸಿಯೇಷನ್, ಹುಬ್ಬಳ್ಳಿ ಇಲ್ಲಿ ಡಿ-ಫಾರ್ಮ ಕೋರ್ಸನ್ನು ಪ್ರಾರಂಭಿಸಲು ಸರ್ಕಾರದ ಅನಾಕ್ಷೇಪಣಾ ಪತ್ರ ನೀಡಲಾಗಿತ್ತು. ನಂತರ ಸದರಿ ಸಂಸ್ಥೆಯು ಅನಿವಾರ್ಯ ಕಾರಣ ಗಳಿಂದ ಡಿ-ಫಾರ್ಮ ಕೋರ್ಸನ್ನು ಪ್ರಾರಂಭಿಸಲಾಗಿಲ್ಲವಾದ್ದರಿಂದ ಸದರಿ ಸಂಸ್ಥೆಗೆ ನೀಡಿರುವ ಅನಾಕ್ಷೇಪಣಾ ಪ್ರಮಾಣ ಪತ್ರವನ್ನು ಹಿಂತೆಗೆದುಕೊಳ್ಳಲಾಗಿತ್ತು.

ಅಧ್ಯಕ್ಷರು, ಹುಡೇಬಿಯಾ ಎಜುಕೇಷನಲ್ ಸೊಸೈಟಿ ಹುಬ್ಬಳ್ಳಿ, ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: 2 ರಲ್ಲಿನ ಪತ್ರದಲ್ಲಿ, ಸಂಸ್ಥೆಯು ಅನಿವಾರ್ಯ ಕಾರಣ ಗಳಿಂದ ಡಿ-ಫಾರ್ಮ ಕೋರ್ಸನ್ನು ಪ್ರಾರಂಭಿಸಲಾಗಿಲ್ಲವೆಂದು ತಿಳಿಸಿ, ಈಗ ಸ್ಥಳೀಯ ವಿದ್ಯಾರ್ಥಿಗಳ ಬೇಡಿಕೆ ಇರುವುದರಿಂದ 2005-06ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಅನುಮತಿ ನೀಡುವಂತೆ ಹಾಗೂ ಸದರಿ ಸಂಸ್ಥೆಯ ಹೆಸರನ್ನು ಅಲ್-ಫಲ್ಲಾ ಕಲ್ಚರಲ್ ಅಂಡ್ ಎಜುಕೇಷನಲ್ ಅಸೋಸಿಯೇಷನ್ ಇಂದ ಹುಡೇಬಿಯಾ ಎಜುಕೇಷನಲ್ ಸೊಸೈಟಿ ಎಂದು ಹಾಗೂ ಕಾಲೇಜಿನ ಹೆಸರನ್ನು ಅಲ್-ಫಲ್ಲಾ ಕಾಲೇಜ್ ಆಫ್ ಫಾರ್ಮಸಿ ಇಂದ ಡಾ.ಎ.ಪಿಜೆ.ಅಬ್ದುಲ್ ಕಲಾಂ ಕಾಲೇಜ್ ಆಫ್ ಫಾರ್ಮಸಿ, ಎಂದು ಬದಲಾಯಿಸಿಕೊಳ್ಳಲು ಸರ್ಕಾರದ ಅನುಮತಿ ನೀಡುವಂತೆ ಕೋರಿರುತ್ತಾರೆ.

ಅಧ್ಯಕ್ಷರು, ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: 3 ರಲ್ಲಿನ ಪತ್ರದಲ್ಲಿ ಪರಿವೀಕ್ಷಣಾ ತಂಡವು ಸದರಿ ಕಾಲೇಜನ್ನು ಪರಿವೀಕ್ಷಿಸಿ ಪರಿವೀಕ್ಷಣಾ ವರದಿಯಲ್ಲಿ ಸದರಿ ಸಂಸ್ಥೆಯು ಡಿ-ಫಾರ್ಮ ವ್ಯಾಸಂಗವನ್ನು ಪ್ರಾರಂಭಿಸಲು ಬೇಕಾದ ಮೂಲ ಭೂತ ಸೌಕರ್ಯಗಳನ್ನು ಹೊಂದಿದ್ದು ಡಿ-ಫಾರ್ಮ ವ್ಯಾಸಂಗವನ್ನು ಪ್ರಾರಂಭಿಸಲು ಅನುಮತಿಸಬಹುದೆಂದು ವರದಿ ನೀಡಿದ್ದು, ಪರಿವೀಕ್ಷಣಾ ತಂಡವು ನೀಡಿರುವ ವರದಿಯಂತೆ ಡಿ-ಫಾರ್ಮ ವ್ಯಾಸಂಗವನ್ನು ಪ್ರಾರಂಭಿಸಲು ಹಾಗೂ ಸಂಸ್ಥೆಯ ಹೆಸರನ್ನು ಮತ್ತು ಕಾಲೇಜಿನ ಹೆಸರನ್ನು ಸಂಸ್ಥೆಯ ಕೋರಿಕೆಯಂತೆ ಬದಲಾಯಿಸುವ ಬಗ್ಗೆ ಸರ್ಕಾರವು ತೀರ್ಮಾನ ತೆಗೆದುಕೊಳ್ಳಲು ಕೋರಿರುತ್ತಾರೆ.

--2

ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: 4 ರಲ್ಲಿನ ಪತ್ರದಲ್ಲಿ ಸದರಿ ಸಂಸ್ಥೆಗೆ ಈ ಹಿಂದೆ ನೀಡಿದ್ದ ಅನಾಕ್ಷೇಪಣಾ ಪತ್ರವನ್ನು ಹಲವು ಷರತ್ತುಗಳಿಗೊಳಪಟ್ಟು ಪುನರ್ ಸ್ಥಾಪಿಸಲು ಹಾಗೂ ಸದರಿ ಸಂಸ್ಥೆಯ ಮತ್ತು ಕಾಲೇಜಿನ ಹೆಸರನ್ನು ಬದಲಾಯಿಸಿಕೊಳ್ಳಲು ಅನುಮತಿ ನೀಡಬಹುದೆಂದು ಶಿಫಾರಸ್ಸು ಮಾಡಿ, ಸರ್ಕಾರದ ಆದೇಶಕ್ಕಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ. ಅದರಂತೆ ಈ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಆಕುಕ 178 ಪಿಟಿಡಿ 2005, ಬೆಂಗಳೂರು, ದಿನಾಂಕ: 29.7.2006.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಆಲ್-ಫಲ್ಹಾ ಕಲ್ಚರಲ್ ಅಂಡ್ ಎಜುಕೇಷನಲ್ ಅಸೋಸಿಯೇಷನ್, ಹುಬ್ಬಳ್ಳಿ ಇವರಿಗೆ ಡಿ-ಫಾರ್ಮ ಕೋರ್ಸನ್ನು ಪ್ರಾರಂಭಿಸಲು ನೀಡಿದ್ದ ಅನಾಕ್ಷೇಪಣಾ ಪತ್ರವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪುನರ್ ಸ್ಥಾಪಿಸಿ, 2005-2006 ನೇ ಶೈಕ್ಷಣಿಕ ಸಾಲಿನಿಂದ 60 (ಅರವತ್ತು ಸೀಟು ಗಳು) ಪ್ರವೇಶ ಮಿತಿಯೊಂದಿಗೆ ಡಿ-ಫಾರ್ಮ ಕಾಲೇಜನ್ನು ಪ್ರಾರಂಭಿಸಲು ಹಾಗೂ ಸದರಿ ಸಂಸ್ಥೆಯ ಹೆಸರನ್ನು ಹುಡೇಬಿಯಾ ಎಜುಕೇಷನಲ್ ಸೊಸೈಟಿ ಎಂದೂ ಹಾಗೂ ಕಾಲೇಜಿನ ಹೆಸರನ್ನು ಅಲ್-ಫಲ್ಹಾ ಕಾಲೇಜ್ ಆಫ್ ಫಾರ್ಮಸಿ ಇಂದ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಕಾಲೇಜ್ ಆಫ್ ಫಾರ್ಮಸಿ, ಎಂದೂ ಬದಲಾಯಿಸಿಕೊಳ್ಳಲು ಸರ್ಕಾರದ ಅನುಮತಿ ನೀಡಲಾಗಿದೆ.

1) ಸಂಸ್ಥೆಯು ರೂ. 2.00 ಲಕ್ಷಗಳಿಗೆ ಬ್ಯಾಂಕ್ ಗ್ಯಾರಂಟಿಯನ್ನು ನೀಡುವುದು.
2) ಕಾಲೇಜನ್ನು ಪ್ರಾರಂಭಿಸುವ ಮೊದಲು ಶೈಕ್ಷಣಿಕ ನಿಬಂಧನೆ 1991ರನ್ವಯ ಬೋಧಕ ಸಿಬ್ಬಂದಿ, ವೈಜ್ಞಾನಿಕ, ತಾಂತ್ರಿಕ ಸಲಕರಣೆಗಳು ಇತ್ಯಾದಿಗಳನ್ನು ಹೊಂದಿ ಪ್ರಾರಂಭಿಸುವುದು.
3) ವಿದ್ಯಾರ್ಥಿಗಳನ್ನು ಡಿ-ಫಾರ್ಮ ಕೋರ್ಸಿಗೆ ಪ್ರವೇಶ ಮಾಡಿಕೊಳ್ಳುವ ಮೊದಲು ಭಾರತ ಫಾರ್ಮಸಿ ಪರಿಷತ್ತು ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನಿಂದ ಮಾನ್ಯತೆಯನ್ನು ಪಡೆಯುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

29/07/06

(ಎಸ್.ಎನ್.ಕೃಷ್ಣಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

--3

ಪ್ರತಿಗೆ:

1) ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2) ಅಧ್ಯಕ್ಷರು, ಪರೀಕ್ಷಾ ಪ್ರಾಧಿಕಾರ ಮಂಡಳಿ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ,ಪಿ.ಕಾಳಿಂಗರಾವ್ ರಸ್ತೆ, ಬೆಂಗಳೂರು-560 027.
3) ಅಧ್ಯಕ್ಷರು, ಹುಡೇಬಿಯಾ ಎಜುಕೇಷನಲ್ ಸೊಸೈಟಿ, ಹೊಸ ಎ.ಪಿ.ಎಂ.ಸಿ.ಯಾರ್ಡ್ ಎದುರು, ಅಮರಗೋಳ್, ಹುಬ್ಬಳ್ಳಿ - 580025.
4) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
6) ಸರ್ಕಾರದ ಜಂಟಿಕಾರ್ಯದರ್ಶಿಯವರ ಆಪ್ತ ಸಹಾಯಕರು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
7) ಶಾಖೆಯ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

REGULATIONS OF GOVERNMENT OF KARNATAKA

SUB :- To Revalidate No Objections Certificate letter given to start 'D' Pharma Course by HUDEBIYA EDUCATIONAL SOCIETY, HUBLI.

REF :- 1) Govt.'s Ltr. NO.AAKUK 110 PTD 84 (1) dated 13-6-84.

2) Appeal dated 28-4-2005 from the President Hudebiya Educational Society, HUBLI.

3) Letter dated 13-9-2005 No.Auo Nie/Pa Pre Mum/30/Vai ve/2005-2006 from the President Examination Authority Mandali, Bangalore.

4) Ltr No.Auo/Nie/110/Plan/2005-2006 dt.16-9-2005 from the Controller of Medicines, Department of Drug control, Bangalore.

In Government's Letter dtd.13-06-84 appearing at Serial No.1 in the above reference, No objection Certificate letter was issued by the Government to start D-Pharma Course by Alfalah Cultural and Educational Association, Hubli, Further since the said Association could not start D-Pharma Course due to unavoidable circumstances the NO OBJECTION CERTIFICATE already given was withdrawn.

In the letter of Sl No.2 of the reference from the President of Hudebiya Educational Society, Hubli it was advised that D-Pharma Course was not able to be started due to pressing circumstances then. However, now there is a strong demand from the local students hereto start the course. It was requested to communicate Government's Approval to start the course from Academical year of 2005-2006.

Further it was also requested to Convey Government's Approval to change the present names of Association/College as under:-

1) Present name of the Association. :- AL FALAH CULTURAL AND EDUCATIONAL ASSOCIATION.(HUBLI)

-TO-

Proposed name of the Association. :- HUDEBIYA EDUCATIONAL SOCIETY, HUBLI.

2) Present name of the College. :- AL-FALAH COLLEGE OF PHARMACY HUBLI.

-TO-

Proposed name of the College. :- DR. A.P.J. ABDULKALAM COLLEGE OF PHARMACY, HUBLI.

NOTARY PUBLIC M.A. SHIVALLI B.Com, LL.B. (Spl) HUBLI REVENUE TALUKA Regd. No. LAW 116 LCL-2013 GOVT. OF KARNATAKA

..2..

No. of Corrections Two (2) only

NOTARY

In the letter at Sl.No.3 under reference from the President, Examination Authority Mandali, Bangalore, it was stated that the Inspection Team has inspected the said College & stated in the Inspection Report that all the basic requirements and facilities to start D-Pharma course are available and that the grant of approval to start D-Pharma Course and to change the names of the society and college as per the Society's request can be considered by the Government as recommended by the Inspection Team.

In the letter at Sl.No.4 of the above reference from the Drug Controller, Department of Drug Control it was stated that the No objection certificate given earlier may be re-validated with certain conditions included and also to change the names of the said society and college. A proposal to the Government in this regard with recommendation for their orders has also been sent.

The proposal has been scrutinised in greater details and accordingly ordered as below:-

GOVT ORDER NO.Aakuk 1/8 PTD 2005, Bangalore dtd.29-7-2006.

Based onthe reasons detailed in the proposal, The No objection certificate granted to Al-Falah Cultural & Educational Association, Hubli to start D-Phama Course is revalidated with the following conditions.

The approval of the Government is hereby communicated to start D-Pharma College from the Academic year 2005-2006 with the limitation of 60 seats (sixty seats) for admission and to change the name of the said society to Hudebiya Educational Society and the name of the college from Al-Falah College of Pharmacy to Dr. APJ Abdul Kalam College of Pharmacy.

1) The Society should submit Bank Guarantee of Two Lakhs (2 Lakhs).



No. of Corrections
One (1) only

NOTARY

NOTARY PUBLIC
M. A. SHIVALLI
B.Com, LL.B. (Spl)
HUBLI
REVENUE TALUKA
Regd. No. LAW
116 LCL-2013
GOVT. OF KARNATAKA

2) As per Educational Clauses of 1991 all the Teaching Staff, Science and Technological Equipments etc., are to be provided before starting the college.

3) Before admission of the students for D-Pharma course, Recognition from Pharmacy Council of India and All India Technical Education Council should be obtained.

As per the order of the Governor of Karnataka and on his behalf.

Sd/-
(S.N. KRISHNAKUMAR)
UNDER SECRETARY TO GOVT.
DEPARTMENT OF HEALTH & FAMILY WELFARE.

Copy to:

1) Controller of Drugs, Department of Drug Control, Palace Road, Bangalore.
2) The President, Examination Authority, Board, Govt Medical Science, University, P.Kalingrao Street, Bangalore-560 027.
3) President, Hudebiya Educational Society, Opp: to APMC Yard Amargol, Hubli-580025.
4) Personal Secretary to Hon.Minister for Medical Education, Vidhan Soudha, Bangalore.
5) Personal Secretary to the Secretary of Government (Medical Education) Health and Family Welfare Department.
6) Personal Assistants to Jr. Secretary of Government (Medical Education) Health & Family Welfare Department.
7) Branch Security: Additional copies.

AFFIDAVIT

In this, I, A.A Kamanagar, Advocate, Hubli dohereby state on solemn affirmation as under:-

I know English and Kannada Languages and I have translated the above document from Kannada to English.

Hence, this affidavit.

HUBLI.
05-11-2014.

DEPONENT.

No. of Corrections
One (1) only
NOTARY

SOLEMNLY AFFIRMED BEFORE ME
NOTARY
05 NOV 2014

NOTARY PUBLIC
M.A. SHIVALLI
B.Com, LL.B. (Spl)
HUBLI
REVENUE TALUKA
Regd. No. LAW 116 LCL-2013
GOVT. OF KARNATAKA